International Journal of Kannada Research
www.kannadajournal.com

ISSN: 2454–5813
IJSR 2016; 2(4): 50-53
© 2016 IJKS
www.kannadajournal.com
Received: 25-08-2016
Accepted: 30-09-2016

**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಚನ್ನಪಟ್ಟಣ, ರಾಮನಗರ ಜಿಲ್ಲೆ,
ಕರ್ನಾಟಕ ರಾಜ್ಯ, ಭಾರತ

**Correspondence**
**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಚನ್ನಪಟ್ಟಣ, ರಾಮನಗರ ಜಿಲ್ಲೆ,
ಕರ್ನಾಟಕ ರಾಜ್ಯ, ಭಾರತ

# ಹೆಗ್ಗಡದೇವಕೋಟೆ ತಾಲೂಕು ಶಾಸನಗಳ ಹಿನ್ನೆಲೆಯಲ್ಲಿ ಆಡಳಿತ ವ್ಯವಸ್ಥೆ ಕುರಿತ ಅಧ್ಯಯನ

**ಡಾ.ಎಸ್.ಕೆ.ದೇವೇಗೌಡ**

**DOI:** https://doi.org/10.22271/24545813.2016.v2.i4a.887

**ಪೀಠಿಕೆ**

ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆಯಲ್ಲಿ ಆಡಳಿತ ವ್ಯವಸ್ಥೆಯನ್ನು ಗುರುತಿಸುವುದಾದರೆ; ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆಯ ಹಿನ್ನೆಲೆಯನ್ನು ಗಮನಿಸಿದರೆ ಅದನ್ನು ಪ್ರಮುಖವಾಗಿ ಎರಡು ವಿಭಾಗಗಳಲ್ಲಿ ಅಳವಿರಬಹುದು. ಅದನ್ನು ಕೇಂದ್ರಾಡಳಿತ ವ್ಯವಸ್ಥೆ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳೆಂದು ಕರೆಯಬಹುದಾಗಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಪುನ್ನಾಟದ ಕಾಲಕ್ಕೆ ಕೇಂದ್ರಾಡಳಿತ ವ್ಯವಸ್ಥೆ ಇತ್ತು ಎನ್ನಬಹುದು. ಏಕೆಂದರೆ ಅಂದಿನ ಕಾಲಕ್ಕೆ ಪುನ್ನಾಟದ ರಾಜರು ಪ್ರಾದೇಶಿಕವಾಗಿ ಆಡಳಿತ ನಡೆಸಿರುವುದು ತಿಳಿದುಬರುವುದರಿಂದ ಅವರ ಕಾಲಕ್ಕೆ ಪುನ್ನಾಟವೇ ಒಂದು ಕೇಂದ್ರವಾಗಿತ್ತು ಎಂದು ಹೇಳಬಹುದು. ಅವರು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಆಡಳಿತವನ್ನು ನಡೆಸಿರುವುದು ಅವರ ಒಟ್ಟಾರೆ ಶಾಸನಗಳಿಂದ ತಿಳಿದುಬರುತ್ತದೆ. ಶಿವಮಾರನ ಕಾಲದಲ್ಲಿ ಪುನ್ನಾಡ 6000ದ ಒಡೆಯನಾಗಿರುವುದರಿಂದ ಈತನ ಕಾಲಕ್ಕೆ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ. ಕ್ರಿ.ಶ.9ನೇ ಶತಮಾನಕ್ಕೆ ಸೇರಿದ ಎರೆಯಪ್ಪರಸನು ನುಗುನಾಡು, ನವಲೆನಾಡುಗಳನ್ನು ಆಡಳಿತ ನಡೆಸುತ್ತಿದ್ದಾಗ, ಜನಪರ ಕೆಲಸ ಮಾಡಿದ್ದಾನೆ. ಬೂತುಗಟಚಿ ಹೆಂಡತಿಯೂ ತನ್ನ ಕಾಲಕ್ಕೆ ಸುಮಾರು 10 ಖಂಡುಗ ಭೂಮಿಯನ್ನು ನೀಡಿರುವುದು ತಿಳಿದುಬರುತ್ತದೆ. ತಲಕಾಡಿನ ಗಂಗರು 7–8ನೇ ಶತಮಾನದಿಂದ 1010 ರವರ ಆಡಳಿತ ನಡೆಸಿರುವುದು ತಿಳಿದುಬರುತ್ತದೆ.

ಚೋಳರ ಕಾಲಕ್ಕೆ ರಾಜೇಂದ್ರ ಚೋಳನ ಶಾಸನವು ಬೆಳತ್ತೂರು ಗ್ರಾಮದ ಪ್ರಕಾರ ನುಗುನಾಡಿ ಜನರಿಗೋಸ್ಕರ ಭೂಮಿಯನ್ನು ದಾನವಾಗಿ ನೀಡಿರುವುದನ್ನು ತಿಳಿಸುತ್ತದೆ. ಅಂಕನಾಥಪುರದ ಶಾಸನದ ಪ್ರಕಾರ ಗಾವುಣ್ಡರು ನಾಗಮಂಗಲವನ್ನು ವಶಪಡಿಸಿಕೊಂಡರೆಂದು ತಿಳಿದುಬರುತ್ತದೆ. ಒಂದನೇ ರಾಜಾಧಿರಾಜ ಕಾಲಕ್ಕೆ ಕೋಳಗಾಲ ಶಾಸನದ ಪ್ರಕಾರ ಸ್ಥಳೀಯ ಅಧಿಕಾರಿ ಉತ್ತಮ ಚೋಳಗೌಡನ ಮಗನಾದ ರಾಚಯ್ಯ ಎಂಬುವವನು ಗಂಗೇಶ್ವರ ದೇವಾಲಯವನ್ನು ಕಟ್ಟಿಸಿರುವುದಾಗಿ ಅಲ್ಲದೆ ತವುಡನಹಳ್ಳಿಗೆ ದಾನವನ್ನು ನೀಡಿ ಗಾಣವನ್ನು ನೀಡಿರುವುದು ಶಾಸನದಿಂದ ತಿಳಿದುಬಂದಿದೆ. ಬೆಳತ್ತೂರು ಮಾಸ್ತಿಕಲ್ಲು ಶಾಸನದ ಪ್ರಕಾರ ನುಗುನಾಡಿನ ಅಧಿಕಾರಿ ತಾಯಿ ಪೊನ್ನಕ್ಕ ಎಡೆನಾಡಿನ ಅಧಿಪತಿಯಾಗಿದ್ದಳು. ನಾಡೋಜನ ಮಗಳು ನವಿಲೆನಾಡಿನ ಅಧಿಕಾರಿಯಾಗಿದ್ದ ಎಂಬುದು ತಿಳಿದುಬಂದಿದೆ. ಬಯಲ್ನಾಡು ಕದಂಬರ ಕಾಲಕ್ಕೆ ಕಿತ್ತೂರಿನ ಕ್ರಿ.ಶ.1079ರ ಶಾಸನದ ಪ್ರಕಾರ ಕಿತ್ತೂರು ರವಿರಾಮೇಶ್ವರ ದೇವಾಲಯಕ್ಕೆ (ದೇವರಿಗೆ) ಬೂದವಾಡಿ, ತೇರುಮಂಗಲ, ಕೇರಳ, ಪುನ್ನಾಡ, ನಿಡುಳೆ ಹಾಗೂ ಕಿಕ್ಕನಾಡ ಅನೇಕ ಅಧಿಕಾರಿಗಳು ದಾನವನ್ನು ಮಾಡಿರುವ ಬಗೆಗೆ ತಿಳಿದುಬರುತ್ತದೆ. ಹೆಗ್ಗಡದೇವನಕೋಟೆ ತಾಲ್ಲೂಕು ಮತ್ತು ಈ ತಾಲ್ಲೂಕಿಗೆ ಅಂಟಿಕೊಂಡಂತೆ ಇರುವ ಕೇರಳ ರಾಜ್ಯದಲ್ಲಿ ಸೇರಿರುವ ವಯ್ನಾಡು ಜಿಲ್ಲೆಯ ಬಹುತೇಕ ಭಾಗವು ಬಯಲುನಾಡು ಎಂದು ಕ್ರಿ.ಶ.8ನೆಯ ಶತಮಾನದಿಂದ ಪ್ರಸಿದ್ಧವಾಗಿತ್ತು. ಇವುಗಳು ದಟ್ಟವಾದ ಮಲೆನಾಡಿನಿಂದ ಬಂದ ಕದಂಬ ವಂಶವು ತನ್ನ ವಂಶದ ಪುನರುತ್ಥಾನಕ್ಕೆ ಆರಿಸಿಕೊಂಡ ಭೂಭಾಗವು ಬಯಲ್ನಾಡು ಎಂದು ಕರೆಯಬಹುದಾಗಿದೆ. ಬಯಲುನಾಡಿನ ಅತ್ಯಂತ ಪ್ರಮುಖವಾದ ಎರಡು ನದಿಗಳಾದ ಕಪಿಲಾ ಮತ್ತು ನುಗು ನದಿಗಳು

ಇಂದಿಗೆ ಕರ್ನಾಟಕದಲ್ಲಿದ್ದರೆ, ಬಯಲುನಾಡಿನ ಪಕ್ಕದಲ್ಲಿ ಹರಿಯುವ ಇಂದಿನ ಪೆರಿಯಾರ್ ಕೇರಳದಲ್ಲಿದೆ. ಮಗ್ಗೆಯಲ್ಲಿರುವ ವೀರಗಲ್ಲೊಂದು ಅಪರೂಪದ ವಿಷಯವನ್ನು ಪ್ರಸ್ತಾಪ ಮಾಡುತ್ತದೆ. ಕೆಲವು ಅಕ್ಷರಗಳು ತೃಟಿತಗೊಂಡು ಸ್ವಲ್ಪ ಗೊಂದಲವನ್ನು ಉಂಟು ಮಾಡುವ ಈ ಶಾಸನದಿಂದ ನಾವು ತಿಳಿಯಬಹುದಾದ ಮಾಹಿತಿಯೆಂದರೆ, ರಾಜಾಧಿರಾಜನಾದ ರವಿಯಮ್ಮರಸನು ವೀರ ಬಯಲ್ನಾಡನ್ನು ಆಳುತ್ತಿದ್ದ ಸಂದರ್ಭದಲ್ಲಿ ಕೊಂಗುನಿಯ ಹೆಗ್ಗಡೆ ಒಂದು ಕೊಡೆಯ ಭೋಗವನ್ನು ಕೊಡು ಎಂದು ಕೇಳಿದನು. ಅಂದರೆ ಏಕಛತ್ರಾಪ್ರತ್ಯವ್ವನು ಎಂದು ಅರ್ಥ. ಅಂದರೆ ಈ ನಾಡಿನ ಆಡಳಿತವನ್ನು ನನಗೆ ಬಿಟ್ಟುಕೊಟ್ಟು ಶರಣಾಗತನಾಗು ಎಂದು ತಿಳಿಯಬಹುದಾಗಿದೆ. ಇದಕ್ಕೆ ಮಣಿಯದ ರವಿಯಮ್ಮರಸನ ವಿರುದ್ಧವಾಗಿ 300 ಜನ ಪ್ರಮುಖರನ್ನು ಕರೆದುಕೊಂಡು ಕೊಂಗುನಿಯ ಅಥವಾ ಕೊಂಗುನಾಡಿನ ಅರಸನಿಗೆ ಗೆಲುವಾಯಿತು. ಆದರೆ ಈ ಯುದ್ಧದಲ್ಲಿ ರವಿಯಮ್ಮರಸನ ಪರವಾಗಿ ಹೋರಾಡಿದ ಮಗ್ಗೆಯ ಪೆಲ್ವಾವ್ವನು ಅಸು ನೀಗಿದನು. ನಿರಂತರ ಯುದ್ಧಗಳಲ್ಲಿ ತೊಡಗಿದ್ದ ಬಯಲ್ನಾಡಿನ ಅರಸರು ಯಾರಿಗೂ ಬಯಲ್ನಾಡನ್ನು ಬಿಟ್ಟು ಕೊಡದೇ ಬೀರಬಯಲ್ನಾಡು ಎಂಬ ಹೆಸರನ್ನು ಪಡೆದಿದ್ದರು ಎಂದು ರವಿಯಮ್ಮರಸನ ಈ ಶಾಸನದಿಂದ ತಿಳಿಯಬಹುದಾಗಿದೆ.

ಈಕರವರ್ಮನು ಬಯಲು ನಾಡಿನ ದೊರೆಗಳನ್ನು ಅತ್ಯಂತ ಪರಾಕ್ರಮಶಾಲಿಯೂ ಅನೇಕ ರೀತಿಯ ಬಿರುದುಗಳನ್ನು ಪಡೆದಿದ್ದವನೂ, ಪಂಡಿತನೂ ಆಗಿದ್ದ ಅರಸನೆಂದರೆ ಈಕರವರ್ಮ. ಕಿತ್ತೂರಿನ ರಾಮೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಶಾಸನವು ಈ ವಂಶದ ಅತ್ಯುನ್ನತ ದಾಖಲೆಯೆಂದು ಈ ಶಾಸನದಿಂದ ತಿಳಿದುಬರುತ್ತದೆ. ಕಿತ್ತೂರಿನ ಈ ಶಾಸನ ತಿಳಿಸುವ ಅತ್ಯಂತ ಮಹತ್ವದ ಸಂಗತಿಯೆಂದರೆ ಈ ಶಾಸನ ಕಾಲದಲ್ಲಿ ಎಂದರೆ 24.11.1079ರ ಹೊತ್ತಿಗೆ ಬಯಲುನಾಡು ಕದಂಬರು ಬಯಲಾಡಯ್ದು ಮುನ್ನೂರ ಎಂದರೆ ಮುನ್ನೂರು ಪ್ರಾಂತ್ಯಗಳ 5 ನಾಡನ್ನು ಎಂದರೆ ಬಯಲುನಾಡು ಸಾವಿರದಯ್ನೂರನ್ನು ಆಳುತ್ತಿದ್ದರು. ಮುನ್ನೂರು ಎಂದರೆ ಮುನ್ನೂರು ಗ್ರಾಮಗಳ ಆಡಳಿತದ ಕೇಂದ್ರವಿರುವ ಐದು ನಾಡುಗಳು ಯಾವುವುಎಂದು ಶಾಸನಗಳಲ್ಲಿ ಖಚಿತ ಮಾಹಿತಿಯಿಲ್ಲವಾದರೂ ಇದೇ ಶಾಸನದ ಆಂತರ್ಯದಲ್ಲಿ ಇರುವ ಮಾಹಿತಿಯನ್ನು ಆಧರಿಸಿ ಸಾಧಾರಣವಾದ ಒಂದು ಊಹೆಯನ್ನು ಮಾಡಬಹುದು. ಮಟಕೆರೆಯ ಗಾವುಂಡ ಒಂದು ಸಿದ್ಧಾಂತವನ್ನು ಕಿತ್ತೂರು, ಮುಟ್ಟಿಗೆ, ಕಡಲೆ, ಜಯಪುರ, ಪೊಸವೊಯಿಲು, ಕಡವಲಗಳಿಂದ ಪುದುವಟ್ಟುಗಳನ್ನು ಸಂಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಸಾಕ್ಷಿಗಳಾಗಿದ್ದ ಪ್ರಮುಖರೆಂದರೆ ಸರಗೂರಿನ ಗಾವುಂಡ ಮಳೆಯೂರಿನ ಗಾವುಂಡ, ಕಿತ್ತಡಿಯೂರ ಪೆರ್ಮಾಡಿಗಾವುಂಡ, ಸಾಗರೆಯ ಗಾವುಂಡ ಹದಗರ ಗಾವುಂಡ, ಕುಸ್ಥತೂರ ನಾಡಾಳ್ವ ಬೆಂಗೆಯೂರ ಪೆರ್ಮಾಡಿ ಗಾವುಂಡ, ಕೋಟೆಯ ರಾಚಮಲ್ಲಗಾವುಂಡ ಇರವಿಚಲ್ಲಮ್ಮ ಕ್ರಿ.ಶ.1079ರ ಈಕರವರ್ಮನ ಶಾಸನದ ನಂತರ ಉಲ್ಲೇಖಗೊಳ್ಳುವ ಬಯಲುನಾಡು ಕದಂಬದೊರೆ ಇರವಿಚಲ್ಲಮ್ಮ ಈತನನ್ನು ಉಲ್ಲೇಖಿಸುವ ಸೋಗಳ್ಳಿಯ ವೀರಗಲ್ಲು ಶಾಸನದ ಕಾಲ ಕ್ರಿ.ಶ.1107 ಇರವಿಚಲ್ಲಮ್ಮನು 200ರ ಬಯಲ್ನಾಡನ್ನು ಜಕ್ಕಯ್ಯ ಬಂಕಯರಸನ ಕಡೆಯ ಹರಿಯ ಎನ್ನುವವನು ಪೊಸವೊಳಲು ಸೋಗೆಪಳ್ಳಿಯ ಮೇಲೆ ದಾಳಿ ಮಾಡಿ ಹಸುಗಳನ್ನು ಸೆರೆಯಿಂದ ಬಿಡಿಸಿ ಕಾದು ಸತ್ತನು. ಮಳಲಿಯ ಶಾಸನದಲ್ಲಿ ಬರುವ ಹೆಸರನ್ನು ಕದಂಬ ಕಣ್ಣೀರ ಎಂದಿರುವುದನ್ನೇ ಗಮನಿಸಿ ಈತನ ಹೆಸರನ್ನು ಕಂಠೀರವ ಎಂದು ಗುರುತಿಸಿದ್ದರು ಎಂದೆನಿಸುತ್ತದೆ. ಆದರೆ ಕದಂಬ ಕಣ್ಣೀರ ಎಂಬ ಬಯಲುನಾಡಿನ ದೊರೆ ಚಾಗಿಗೆ ಇದ್ದ ಬಿರುದು ಎಂದು ದೃಢವಾಗಿದೆ.

ಬಯಲ್ನಾಡು ಕದಂಬರಿಗೆ ಸಂಬಂಧಿಸಿದಂತೆ ದೊರೆತಿರುವ ಕೊನೆಯ ಶಾಸನವೆಂದರೆ ಕ್ರಿ.ಶ.25–11–1137ಕ್ಕೆ ಸೇರಿದ ನರಸೀಪುರದ ಶಾಸನವು ಐತಿಹಾಸಿಕವಾಗಿ ಮುಖ್ಯವಾದ ಶಾಸನ. ದುರಾದೃಷ್ಟವಶಾತ್ ಈ ಶಾಸನದಲ್ಲಿ ಸರಿಯಾಗಿ ಬಯಲ್ನಾಡು ಕದಂಬ ದೊರೆಯ ಹೆಸರು ಇರುವ ಜಾಗವೇ ತೃಟಿತವಾಗಿದೆ. ಮಗ್ಗೆಯಲ್ಲಿ ಕ್ರಿ.ಶ.1079ರ ಶಾಸನದ ಪ್ರಕಾರ ಕೊಂಗುಣಿ ಗಾವುಂಡನ ಅಧಿಕಾರ ನಡೆಸಿರುವುದು ತಿಳಿದುಬಂದಿದೆ. ಕಿತ್ತೂರು 12 ಗ್ರಾಮಗಳ ಆಡಳಿತವನ್ನು ಹೊಂದಿದ್ದ ಕೇಂದ್ರವಾಗಿದ್ದ ವಿಚಾರ ತಿಳಿದುಬರುತ್ತದೆ. ಆದಕಾರಣ ಕಿತ್ತೂರಿನಲ್ಲಿ ತನ್ನದೇ ಆದ ಕೇಂದ್ರಾಡಳಿತವನ್ನು ಹೊಂದಿದ್ದು, ಇಲ್ಲಿ ಕೇಂದ್ರ ಸರ್ಕಾರ ಅಸ್ಥಿತ್ವದಲ್ಲಿತ್ತು. ಅಲ್ಲದೆ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಆಡಳಿತವನ್ನು ನಡೆಸಿರುವುದು ತಿಳಿದುಬರುತ್ತದೆ. ಬೆಳತ್ತೂರು ಶಾಸನ ಪ್ರಕಾರ, ನುಗುನಾಡನಲ್ಲಿರುವ ಅನೇಕ ಊರುಗಳ ಗೌಡಗಳು ಅದೇ ಊರಿನ ದೇವಾಲಯಕ್ಕೆ 60 ಗದ್ಯಾಣ ಮತ್ತು 400 ಸಲಗೆ ಭತ್ತವನ್ನು ನೀಡಿರುವ ವಿಚಾರ ಇದೆ. ಬಪ್ಪನಹಳ್ಳಿಯ ಪೆರುಮಾಳಪುರ ಅಗ್ರಹಾರವನ್ನಾಗಿ ಮಾಡಿ 26 ವೃತ್ತಿಗಳನ್ನಾಗಿ ವಿಭಜಿಸಿ ಅಲ್ಲಿಯ ಗೋಪನಾಥ ದೇವಾಲಯ ಹಾಗೂ ಬ್ರಾಹ್ಮಣರಿಗೆ ದಾನದತ್ತಿಗಳನ್ನು ನೀಡಿರುವುದರ ಬಗ್ಗೆ ತಿಳಿದುಬರುತ್ತದೆ.

ವಿಜಯನಗರ ಅರಸರ ಕಾಲಕ್ಕೆ ಸುಮಾರು 11 ಶಾಸನಗಳಿವೆ. ಸಾಗರೆ ಊರಿನ ವೆಂಕಟಸುಬ್ಬಾಭಟ್ಟರಲ್ಲಿ ದೊರೆತ ತಾಮ್ರ ಶಾಸನದ ಪ್ರಕಾರ ಇಮ್ಮಡಿ ಹರಿಹರನ ಆಡಳಿತ ವ್ಯವಸ್ಥೆಯನ್ನು ಕುರಿತು ತಿಳಿದುಬರುತ್ತದೆ. ಇಮ್ಮಡಿ ನರಸಿಂಹನು ಕ್ರಿ.ಶ.1493ರಲ್ಲಿ ಕೆರೆಯೊಂದನ್ನು ನಿರ್ಮಿಸಿ, ದೇವಸಮುದ್ರ ಎಂಬ ಅಗ್ರಹಾರವನ್ನಾಗಿ 40 ಜನ ಬ್ರಾಹ್ಮಣರಿಗಾಗಿ ದಾನ ಬಿಟ್ಟಿರುವ ವಿಚಾರ ತಿಳಿದುಬರುತ್ತದೆ. ಉಮ್ಮತ್ತೂರು ಪಾಳೆಯಗಾರರು ವಿಜಯನಗರದ ಅರಸರು ಸಾಮಂತರಾಗಿ ಈ ಭಾಗದಲ್ಲೂ ಆಳ್ವಿಕೆ ನಡೆಸಿದ್ದಾರೆ. ಇವರು ಆಡಳಿತ ನಡೆಸಿರುವ ಬಗ್ಗೆ ಮಲಿಯೂರು ಮತ್ತು ದುಗ್ಗಲೀ ಶಾಸನಗಳಿಂದ ತಿಳಿದುಬರುತ್ತದೆ. ಚಾಮರಾಜ ಒಡೆಯರ್‌ರವರು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡುತ್ತಿರುವ ಸಂದರ್ಭದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಮುಳ್ಳೂರು ಗ್ರಾಮದಲ್ಲಿ ಲಕ್ಷ್ಮೀಕಾಂತ ದೇವರಿಗೆ ದೀಪಮಾಲೆ ಕಂಬವನ್ನು ಮಾಡಿಸಿರುವ ಬಗ್ಗೆ ತಿಳಿದುಬರುತ್ತದೆ. ದೊಡ್ಡದೇವರಾಜ ಒಡೆಯರ್ ಕಾಲಕ್ಕೆ ಉಪಗ್ರಾಮವಾದ ಹೊರಮಳಲಿಪುರವನ್ನು ನಂಜಣ್ಣ ಎಂಬುವವನು ವಾರಣಾಸಿ ಎಂಬುವವನಿಗೆ ದತ್ತಿಯಾಗಿ ನೀಡಿರುವುದನ್ನು ತಿಳಿಸುತ್ತದೆ. ದೊಡ್ಡದೇವರಾಜ ಒಡೆಯರ್ ಕಾಲಕ್ಕೆ ನಾನಾಗೋತ್ರದ ಜನರಿಗೆ ದಾನ ನೀಡಿರುವುದು ಅಲ್ಲದೆ ಸಕಲ ವಿದ್ಯಾಪಾರಂಗತರಾದ ಬ್ರಾಂಹಣೋತ್ತರವರಿಗೂ ನೆರವೇರಿಸಿದ ಲಕ್ಷಹೋಮದಲ್ಲಿ ಬಾಗಿಯಾಗುವುದರ ಮೂಲಕ ಎಲ್ಲರೂ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಲೆಂದು ಶಾಸನದಲ್ಲಿ ತಿಳಿಸಲಾಗಿದೆ. ಕಂಠೀರವ ಒಡೆಯರ್‌ರವರು ಕಿತ್ತೂರು ಗ್ರಾಮದ ಸೇನಭೋವನಿಗೆ ಭೂದಾನವನ್ನು ನೀಡಿರುವ ವಿಚಾರ ಇದೆ.

ರಾಜರುಗಳು ಮಂತ್ರಿಗಳನ್ನು ಮತ್ತು ಇತರೆ ಅಧಿಕಾರಿಗಳನ್ನು ನೇಮಿಸಿಕೊಂಡಿರುವುದು ಸಾಕಷ್ಟು ಆಧಾರಗಳಿಂದ ತಿಳಿದುಬರುತ್ತದೆ. ಪ್ರತಿಯೊಂದು ಸಾಮ್ರಾಜ್ಯದ ಆಡಳಿತ ನಿರ್ವಹಣೆಯಲ್ಲಿ ರಾಜನಿಗೆ ಸಹಾಯಕರಾಗಿ ಅನೇಕ ಮಂತ್ರಿಗಳಿರುತ್ತಿದ್ದರು. ಮಹಾಪ್ರಧಾನ, ಸೇನಾಪತಿ, ದಂಡಾಧಿಪತಿ, ಸುಂಕಾಧಿಕಾರಿ, ಗಾವುಂಡ ಇನ್ನೂ ಮೊದಲಾದ ಹಲವಾರು ರೀತಿಯ ಅಧಿಕಾರಿ ವೃದ್ಧ ಇರುತ್ತಿತ್ತು. ಅಲ್ಲದೆ ಅವರುಗಳು ಕಾರ್ಯನಿರ್ವಹಿಸಿರುವುದು ಬಗ್ಗೆ ಆಧಾರಗಳಿವೆ. ಹೆಗ್ಗಡದೇವನಕೋಟೆಯ ಭಾಗದಲ್ಲಿ ಆಡಳಿತ ನಡೆಸಿದ ಪುನ್ನಾಟ ಅರಸನನ್ನು ಕುರಿತು ವ್ಯಕ್ತಪಡಿಸುತ್ತದೆ. ಈ ಶಾಸನದ ಪ್ರಕಾರ ಈ ಭಾಗದ ನುಗುನಾಡು, ನವಿಲೆನಾಡು, ಕಿಳ್ಳೆ

ನಾಡುಗಳನ್ನು ಕುರಿತು ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಎಮ್ಮೆ, ಹಸು, ಕುದುರೆ, ರತ್ನಗಂಬಳಿ, ಮಾಣಿಕ್ಯ, ಚಿನ್ನ, ಬೆಳ್ಳಿ, ಮುತ್ತು, ಹವಳಗಳನ್ನು ಹೊಂದಿತ್ತೆಂದು ಈ ಪ್ರಾಂತ್ಯವು ಶ್ರೀಮಂತಿಕೆಯಿಂದ ಕೂಡಿತ್ತೆಂದೂ ಇವೆಲ್ಲವುಗಳನ್ನು ನೋಡಿಕೊಳ್ಳುವುದಕ್ಕೆ ಅಧಿಕಾರಿಗಳ ನಗರವೇ ಇತ್ತೆಂದು ಹೇಳಬಹುದಾಗಿದೆ. ಇಮ್ಮಡಿ ಬೂತುಗನ ಅಧಿಕಾರಿಯಾದ ಭುವನಾದಿಯನನ್ನು ಐವರು ಸಾಮಂತರು ಹಾಗೂ ಹೆಗ್ಗಡೆಗಳ ಬಗ್ಗೆಯೂ ಸಹ ತಿಳಿದುಬರುತ್ತದೆ.

ಹೊಯ್ಸಳರ ಕಾಲಕ್ಕೆ ಬಲ್ಲಾಳದೇವ ದಂಡನಾಯಕನ ಅಧೀನ ನಾಯಕರು ಅಧಿಕಾರವನ್ನು ನಡೆಸಿರುವುದು ತಿಳಿದುಬರುತ್ತದೆ. ಈ ಶಾಸನದ ಕಾಲ ಕ್ರಿ.ಶ.19–2–1048 ಅಂದರೆ ಕ್ರಿ.ಶ.24–11–1079ರ ಕಿತ್ತೂರು ಶಾಸನವು ತಿಳಿಸುವ ಹಾಗೆ ಆಗ ಬಯ್ಲ್ನಾಡ ಕದಂಬ ದೊರೆ ಈಕರವರ್ಮನೇ ಆಳುತ್ತಿರುತ್ತಾನೆ. ಕ್ರಿ.ಶ.1100ರ ದಬ್ಬೆ ಅಗ್ರಹಾರದ ಶಾಸನ ತಿಳಿಸುವಂತೆ ಹೊಯ್ಸಳರ ದೊರೆ ಎರೆಯಂಗ (ಕ್ರಿ.ಶ.1098–1103)ರ ಕಾಲದಲ್ಲಿ ಮತ್ತು ಕ್ರಿ.ಶ.1103ರ ಸಿಂಧಗಿರಿ ಶಾಸನ ಪ್ರಕಾರ ಹೊಯ್ಸಳರ ದೊರೆ ಒಂದನೆಯ ಬಲ್ಲಾಳನ (ಕ್ರಿ.ಶ.1102–1108)ರ ಕಾಲಕ್ಕೆ ಬಯಲುನಾಡು ಹೊಯ್ಸಳರ ಗಡಿನಾಡಾಗಿತ್ತು. ಆದರೆ ಕ್ರಿ.ಶ.1107ರಲ್ಲಿ ಬಯಲುನಾಡು ಕದಂಬರ ಆಳ್ವಿಕೆಗೆ ಈ ಪ್ರದೇಶದ ಆಳ್ವಿಕೆ ದಕ್ಕಿತು. ಈ ಸಮಯದಲ್ಲಿ ಕದಂಬರ ದೊರೆಯಾಗಿದ್ದವನು ಇರವಿಚಲ್ಲಮ್ಮ, ಮೊದಲನೆಯ ಬಲ್ಲಾಳ ನಂತರ ಹೊಯ್ಸಳರ ಅತೀ ಮುಖ್ಯ ದೊರೆಯಾದ ವಿಷ್ಣುವರ್ಧನ (ಕ್ರಿ.ಶ.1108–1141)ರ ಕಾಲದಲ್ಲಿ ಬಯಲ್ನಾಡು ಕದಂಬರನ್ನು ಸಂಪೂರ್ಣವಾಗಿ ತಮ್ಮ ಅಧಿಕಾರವನ್ನು ಕಳೆದುಕೊಂಡಂತೆ ಕಂಡುಬರುತ್ತದೆ.

ಹೆಗ್ಗಡದೇವನಕೋಟೆ ತಾಲ್ಲೂಕಿನ ಪ್ರಭುಗಾವುಂಡರು ಹತೋಟಿಯಲ್ಲಿ ಗ್ರಾಮಗಳ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಒಂದು ಊರಿನಲ್ಲಿ ಒಬ್ಬ ಗಾವುಂಡ ಇರುತ್ತಿದ್ದರು. ಕೆಲವು ಗ್ರಾಮದಲ್ಲಿ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಕೆಲವು ಗ್ರಾಮಗಳಲ್ಲಿ ಹಲವಾರು ಗಾವುಂಡರಿದ್ದು, ಅವರೆಲ್ಲರ ಮೇಲೆ ಒಬ್ಬ ಪ್ರಧಾನ ಗಾವುಂಡ ಇರುತ್ತಿದ್ದನು. ಗಾವುಂಡರುಗಳ ವಂಶಪಾರಂಪರ್ಯವಾಗಿ ಮುಂದುವರೆಯುತ್ತಿದ್ದರು. ಇವರು ಊರಿನ ಹಿತಕ್ಕಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಕೊಂಗುಣಿ ಗಾವುಣ ಕ್ರಿ.ಶ.998–999ರ ಕಾಲಕ್ಕೆ ಈತನು ಮಗ್ಗೆಯ ಊರಿನಲ್ಲಿ ಗಾವುಂಡಗೈಯುತ್ತಿದ್ದನು. ನರಸಿಂಘಗವುಣ ಕ್ರಿ.ಶ.10ನೆಯ ಶತಮಾನದಲ್ಲಿ ಈತನು ಮಳಲಿ ಗ್ರಾಮದಲ್ಲಿ ಗಾವುಂಡನಾಗಿದ್ದನು. ಜವನಿ ಗಾವುಣ ಈತನು ಕ್ರಿ.ಶ.1020ರಲ್ಲಿ ಬೆಳತ್ತೂರು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಸ್ಥಳೀಯ ಬಾಣೇಶ್ವರ ದೇವಾಲಯಕ್ಕೆ ಭೂದಾನ ನೀಡಿರುವ ವಿಚಾರ ತಿಳಿದುಬರುತ್ತದೆ. ಜಯಗೊಂಡ ಬೋಳಪೆರ್ಮಾಡಿ ಗಾವುಣನು ಅದೇ ಶಾಸನದಿಂದ ತಿಳಿಸಿರುವಂತೆ ಈ ಮೇಲಿನ ಜನನಿ ಗಾವುಂಡನ ಪುತ್ರ ಬೆಳತ್ತೂರು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು ಎಂಬುದು ತಿಳಿದುಬರುತ್ತದೆ. ಎಚಗಾವುಣನು ಕ್ರಿ.ಶ.1030ರಲ್ಲಿ ಈತನು ಲಕ್ಷ್ಮಣಾಪುರ ಗ್ರಾಮದಲ್ಲಿ ಗಾವುಂಡನಾಗಿದ್ದನು.

ಕ್ರಿ.ಶ.1079ರ ಕಿತ್ತೂರು ಶಾಸನದಲ್ಲಿ ಮಳೆಯೂರು ಗಾವುಂಡ, ಕಿತ್ತಡಿಯೂರ ಪೆರ್ಮಾನಡಿ ಗಾವುಣ್ಡ, ಸಾಗರೆಯ ಗಾವುಣ್ಡ, ಹದಗದ ಗಾವುಣ್ಡ, ಬೆಂಗೆಯೂರ ಪೆರ್ಮಾಡಿಗಾವುಣ್ಡ, ಮಣಲಿಯ ಸತ್ಯವಾಕ್ಯ ಗಾವುಣ್ಡ, ಕೋಟೆಯ ರಾಚಮಲ್ಲ ಗಾವುಣ್ಡ, ಇವರುಗಳ ಉಲ್ಲೇಖಗಳಿವೆ. ಇವರು ಸ್ಥಳೀಯ ರಾಮೇಶ್ವರ ದೇವಾಲಯದ ಧಾರ್ಮಿಕ ಚಟುವಟಿಕೆಗಳಿಗೆ ದಾನ ನೀಡಿರುವ ವಿಚಾರ ತಿಳಿದುಬರುತ್ತದೆ. ಕ್ರಿ.ಶ.1107ರಲ್ಲಿ ಜಕ್ಕಯ್ಯನು ಸೋಗಳ್ಳಿ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದ ವಿಚಾರ ತಿಳಿದುಬರುತ್ತದೆ. ಕ್ರಿ.ಶ.1115–1116ರ ಶಾಸನೋಕ್ತ, ಈತನು ಅಣ್ಣೂರು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಗೋಗ್ರಹಣ ಯುದ್ಧದಲ್ಲಿ ಮರಣ ಹೊಂದಿದ ಅರಿಯಗಾವುಂಡನ ವಿನಯಾರ್ಥವಾಗಿ ವೀರಗಲ್ಲನ್ನು ನಿಲ್ಲಿಸಿದ್ದನು. ಬಮ್ಮಗಾವುಣನು ಕ್ರಿ.ಶ.1137ರಲ್ಲಿ ನರಸೀಪುರ ಶಾಸನದಲ್ಲಿ ಉಲ್ಲೇಖಿತನಾಗಿದ್ದಾನೆ. ಈತನು ಸಹ ಈ ಊರಿನಲ್ಲಿ ಗಾವುಂಡನಾಗಿದ್ದನು. ಬೀಚಗವುಡನು ಬಮ್ಮಗಾವುಣನ ಸುಪುತ್ರ, ಈತನು ಇದೇ ಊರಿನಲ್ಲಿ ಗಾವುಂಡಗೈಯುತ್ತಿದ್ದನು. ಪೆರ್ಮಾಡಿಗಾವುಣನು ಕ್ರಿ.ಶ.12ನೇ ಶತಮಾನದಲ್ಲಿ ಬೆಳತ್ತೂರಿನಲ್ಲಿ ಗಾವುಂಡನಾಗಿದ್ದನು. ಒಂಕಗವುಡನು ಮಚ ಕುಲದವನು ಕ್ರಿ.ಶ.1211ರಲ್ಲಿ ಕಳ್ಳಂಬಾಳು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಸ್ಥಳೀಯ ಕಾಮೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದಾರೆ. ಮೊದ್ದಿಗವುಡನು ಕಳ್ಳಂಬಾಳುವಿನಲ್ಲಿ ಕ್ರಿ.ಶ.1211ರಲ್ಲಿ ಶಾಸನೋಕ್ತ ಈತನು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಸ್ಥಳೀಯ ಕಾಮೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದಾರೆ.

ಕ್ರಿ.ಶ.1218ರಲ್ಲಿ ಕಳ್ಳಂಬಾಳು ಗ್ರಾಮದಲ್ಲಿ ಗಾವುಂಡುಗೈಯುತ್ತಿದ್ದರು. ಇವರ ಸಮಸ್ತ ಪ್ರಭುಗಳೊಂದಿಗೆ ಜೊತೆಗೂಡಿ ಸ್ಥಳೀಯ ಕಾಮೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದಾನೆ. ಕುಂದೂರು ಗ್ರಾಮದಲ್ಲಿ ಕ್ರಿ.ಶ.1300 ರಲ್ಲಿ ಗಾವುಂಡಗೈಯುತ್ತಿದ್ದರು. ಕುಂದೂರು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದರು. ಇವರು ಸಮಸ್ತ ಪ್ರಭುಗಳೊಂದಿಗೆ ಜೊತೆಗೂಡಿ ಕಾಮೇಶ್ವರ ದೇವಾಲಯಕ್ಕೆ ದಾನ ನೀಡಿದ್ದಾರೆ. ಕೇತೇಗೌಡನು ಕ್ಯಾತನಹಳ್ಳಿಯ ಕ್ರಿ.ಶ.1322ರಲ್ಲಿ ಶಾಸನೋಕ್ತವಾಗಿ ಈತನು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಮಲ್ಲಿನಾಥ ದೇವಾಲಯವನ್ನು ನಿರ್ಮಿಸಿ ಮತ್ತು ಕೆರೆಯನ್ನು ಕಟ್ಟಿಸಿದ್ದಾರೆ. ಹೊಯಿಸಳಗೌಂಡನು ಈ ಮೇಲಿನ ಕೇತಗೌಡನ ಸುಪುತ್ರ, ಈತನು ಅದೇ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದ ವಿಚಾರವಿದೆ. ಈತನು ಸಮಸ್ತ ಪ್ರಭುಗಳೊಂದಿಗೆ ಜೊತೆಗೂಡಿ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಮಂಟಪವನ್ನು ನಿರ್ಮಿಸಿ ಭೂದಾನ ಮಾಡಿದ್ದಾನೆ. ಮಾರಗವುಡನು ಕ್ರಿ.ಶ.ಸುಮಾರು 12–13ನೇ ಶತಮಾನದಲ್ಲಿ ಜಿನ್ನಹಳ್ಳಿ ಗ್ರಾಮದಲ್ಲಿ ಗಾವುಂಡನಾಗಿದ್ದನು. ಮಾದಿಗವುಡನು ಮಾರಗವುಡನ ಪುತ್ರ. ಈತನು ಗ್ರಾಮದಲ್ಲಿ ಕ್ರಿ.ಶ. ಸುಮಾರು 12–13ನೇ ಶತಮಾನದಲ್ಲಿ ಗಾವುಂಡಗೈಯುತ್ತಿದ್ದನು.

ಸಿರುಗುಗಾವುಡನ ಮತ್ತು ಮಲ್ಲಿಗೊವಡರು ಕ್ರಿ.ಶ.1416ರ ಶಾಸನೋಕ್ತ ಇವರು, ಸರಗೂರಿನಲ್ಲಿ ಗಾವುಂಡಗೈಯುತ್ತಿದ್ದರು. ಕೆಂಪಣ್ಣಗವುಡನು ಸರಗೂರಿನ ಕ್ರಿ.ಶ.1432ರ ಶಾಸನೋಕ್ತ, ಈತನು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಬೆಳಗೊಳದ ಗೊಮ್ಮಟನಾಥ ಸ್ವಾಮಿಗಳ ಸಂರಕ್ಷಣೆಗಾಗಿ ಭೂದಾನ ನೀಡಿದ್ದಾನೆ. ಮಾದಿಗೊಂಡನು ಈತನು ಕ್ರಿ.ಶ. ಸುಮಾರು 15–16ನೇ ಶತಮಾನದಲ್ಲಿ ಮಗ್ಗೆ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಯಬಗೌಡನು ಕ್ರಿ.ಶ. ಸುಮಾರು 15–16ನೇ ಶತಮಾನದಲ್ಲಿ ಈತನು ಮಾರ್ಚಹಳ್ಳಿ ಗ್ರಾಮದಲ್ಲಿ ಗಾವುಂಡನಾಗಿದ್ದನು. ಮುಡಕ್ಕುಲ್ಯೆಯನ್ ಕುಚ್ಚಗಾಮುಣ್ದರ್‌ನು ಕಳ್ಳಂಬಾಳು ಗ್ರಾಮದಲ್ಲಿ ಕ್ರಿ.ಶ.1559 ರಲ್ಲಿ ಈತನು ಗಾವುಂಡಾಗೈಯುತ್ತಿದ್ದನು.

ಸಿಂಗಗೌಡನು ಕ್ರಿ.ಶ.1569ರಲ್ಲಿ ಪುರದಕಟ್ಟೆ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ನಂಜಗೌಉಡನು ಈತನು ಸಿಂಗಗೌಡನ ಮಗ, ಈತನು ಗ್ರಾಮದಲ್ಲಿ ಗಾವುಂಡನಾಗಿದ್ದನು. ಕಂನಪ್ಪ ಲಿಂಗೇಗಉಡನು ಈತನು ಕಲ್ಲಹಳ್ಳಿ ಕುಲದವನು. ಈತನು ಕ್ರಿ.ಶ.1738ರಲ್ಲಿ ಕಳ್ಳಂಬಾಳುವಿನಲ್ಲಿ ಗಾವುಂಡಗೈಯುತ್ತಿದ್ದನು. ಕಂನಪ್ಪ ಲಿಂಗೇಗಉಡನ ಮಗ ಕಪ್ಪಣಗಉಡ, ಕಪ್ಪಣಗಉಡ ಮಗ ಸಂಬುಗಉಡ ಮಗ ಕಪ್ಪಣಗಉಡ ಈ ಗ್ರಾಮದಲ್ಲಿ ಗಾವುಂಡಗೈಯುತ್ತಿದನು. ಇವರೆಲ್ಲರೂ ಸ್ಥಳೀಯ ಕಾಮೇಶ್ವರ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡಿದ್ದರು.

ಈ ಶಾಸನದಲ್ಲಿ ಕನ್ನಪ್ಪ ಲಿಂಗೇಗೌಡನ ಕುಲ ಮತ್ತು ವಂಶಾವಳಿಯ ಉಲ್ಲೇಖಗಳಿವೆ. ದೇವಣಗಉಡನು ಕ್ರಿ.ಶ.17ನೆಯ ಶತಮಾನಕ್ಕೆ ಸರಗೂರಿನಲ್ಲಿ ಗಾವುಂಡನಾಗಿದ್ದನು.

ಮಾರಗಉಡನು ದೇವಣಗೌಡನ ಪುತ್ರ. ಈತನು ಇದೇ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಸ್ಥಳೀಯ ನರಸಿಂಹ ದೇವಾಲಯದ ರಂಗಮಂಟಪಕ್ಕೆ ಬಾಗಿಲನ್ನು (ದ್ವಾರಬಂಧವನ್ನು) ಕಟ್ಟಿಸಿದ್ದನು. ಕೆಂಪಗಉಡನು ಕ್ರಿ.ಶ. ಸುಮಾರು 17ನೇ ಶತಮಾನದಲ್ಲಿ, ಈತನು ಸರಗೂರು ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಮುದ್ದಗಉಡನು ಕೆಂಪೇಗೌಡನ ಪುತ್ರ. ಈತನು ಇದೇ ಗ್ರಾಮದಲ್ಲಿ ಗಾವುಂಡನಾಗಿದ್ದನು. ಸ್ಥಳೀಯ ನರಸಿಂಹ ದೇವಾಲಯ ರಂಗಮಂಟಪದ ಸೇವೆ ಕಾರ್ಯಗಳನ್ನು ಕೈಗೊಂಡಿದ್ದನು.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ನ್ಯಾಯಾಡಳಿತ ವ್ಯವಸ್ಥೆ ಇತ್ತು ಎಂದು ಪರಿಗಣಿಸಬಹುದಾಗಿದೆ. ಪ್ರಾಂತ್ಯಗಳಲ್ಲಿ ಸ್ಥಳೀಯ ನ್ಯಾಯಾಧೀಶರನ್ನು ನೇಮಕ ಮಾಡಲಾಗುತ್ತಿತ್ತು. ನ್ಯಾಯಾಧೀಶರು ಗ್ರಾಮದ ಗೌರವಸ್ಥ ಹಿರಿಯರ ಹೇಳಿಕೆಗಳನ್ನು ಪಡೆದು ನ್ಯಾಯವನ್ನು ತೀರ್ಮಾನಿಸುತ್ತಿದ್ದರು. ಕೆಲವೊಂದು ಸಮಯದಲ್ಲಿ ಜಾತಿ ಜಾತಿಗಳ ಸಂಘರ್ಷವನ್ನು ತೀರ್ಮಾನಿಸುವುದು ಶಾಸನಗಳಿಂದ ತಿಳಿದುಬಂದಿದೆ. ಮೋಸ, ದ್ರೋಹ, ಬ್ರಾಹ್ಮಣಹತ್ಯೆ ಮಾಡುವುದು, ಹಿಂಸೆ ಕೃತ್ಯಗಳು ಘೋರ ಅಪರಾಧವಾಗಿದ್ದವು, ಮೊದಲಾದ ಅಪರಾಧಗಳನ್ನು ಪರಿಗಣಿಸಿ ನ್ಯಾಯ ತೀರ್ಮಾನ ಮಾಡಿ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಧರ್ಮದ ಆಧಾರದ ಮೇಲೂ ಸಹ ನ್ಯಾಯ ತೀರ್ಮಾನ ಮಾಡುವ ವ್ಯವಸ್ಥೆಯನ್ನು ಸಹ ಕಾಣಬಹುದಾಗಿದೆ. ಕೆಲವು ಗ್ರಾಮಗಳಲ್ಲಿ ದೇವಾಲಯಗಳಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದರು. ಗ್ರಾಮಗಳಲ್ಲಿ ಗ್ರಾಮಸ್ಥರುಗಳು ಗ್ರಾಮಸಭೆಗಳು ಪಂಚಾಯಿತಿ, ಗೌಡ ಅಥವಾ ಗಾವುಂಡರು, ಪಟೇಲ ಮೊದಲಾದವು, ಸೇರಿ ನ್ಯಾಯ ತೀರ್ಮಾನ ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ.

**ಗ್ರಂಥಸೂಚಿ**


1. ಡಾ.ಸಿ.ಯು.ಮಂಜುನಾಥ್, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (ಕ್ರಿ.ಶ.1150–1340), 2012
2. ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150), 2015
3. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ ಸಂಪುಟ–1, 2005
4. ಹೆಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, 2010
5. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–3, ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಂಡುಬರುವ ಶಾಸನಗಳಲ್ಲಿ ಆಡಳಿತವನ್ನು ಗುರುತಿಸಲಾಗಿದೆ.